

ಕ್ಷಿಪ್ರ ದಾರಿಗಳಿಲ್ಲ. ಅಷ್ಟೇಕೆ, ಬಳಸುದಾರಿಯಲ್ಲಿಯೇ ಹೆಚ್ಚಿನ ಅರಿವು ದೊರೆಯುವುದು. ಆದರೆ, ಕುದುರೆಯನ್ನು ನೀರಿನ ಬಳಿಗೆ ಕರೆದೊಯ್ಯಬಹುದು. ನೀರು ಕುಡಿಯುವುದು ಕುದುರೆಯ ಕೆಲಸವೇ ಆಗಿರುತ್ತದೆ. ನಮ್ಮ ಪರಂಪರೆಯ ಬಗ್ಗೆ ಸರಿಯಾದ ತಿಳಿವು, ಮಾರ್ಗದರ್ಶನ ಕೊಟ್ಟರೆ, ಕಲೆಯ ನಿಜವಾದ ಆಶಯವು ಹೊಸತಲೆಮಾರಿನ ಪ್ರಯತ್ನಗಳಲ್ಲಿ ಚಿಗುರೊಡೆಯುತ್ತದೆ ಮತ್ತು ಅದು ತನ್ನದೇ ಆದ ದಾರಿಯಲ್ಲಿ ಮುಂದುವರೆಯುತ್ತದೆ ಎಂದು ನಾನು ನಂಬುತ್ತೇನೆ.

◆ **ಬಹುಶಃ ನಿಮಗೊಂದು ಸಾಮಾನ್ಯ ಪ್ರಶ್ನೆ ಸದಾ ಎದುರಾಗಬಹುದು. ಅದು ನಿಮ್ಮ ಸಮುದಾಯಕ್ಕೆ ಸಂಬಂಧಿಸಿದ್ದು. ಸಾಧನೆಯ ಸಂದರ್ಭದಲ್ಲಿ ನೀವು ಎದುರಿಸಿದ ಸವಾಲುಗಳನ್ನೇನಾದರೂ ಹಂಚಿಕೊಳ್ಳುವಿರಾ?**

ಅದೃಷ್ಟವಶಾತ್ ಅಂತಹ ಸವಾಲುಗಳನ್ನು ನಾನು ದಾಟಿ ಬಂದೆ. ಮೊದಲನೆಯದಾಗಿ, ಮಲೇಷ್ಯಾದಲ್ಲಿ ಥಿಯೇಟರ್ ಕಡೆಗೆ ಹೋಗುವವರ ಸಂಖ್ಯೆಯೇ ಕಡಿಮೆ. ಮುಸ್ಲಿಂ ವ್ಯಕ್ತಿಯೊಬ್ಬ ದೇವಸ್ಥಾನದಲ್ಲಿ ಬೆಳೆದು ಬಂದ ನೃತ್ಯವನ್ನು ಕಲಿತಿರುವುದೊಂದು ದೊಡ್ಡ ಸಮಸ್ಯೆಯೆಂದು ಯಾರಿಗೂ ಅನಿಸಲಿಲ್ಲ. ನನ್ನ ಬಾಲ್ಯ 60 ಮತ್ತು 70ರ ದಶಕದಲ್ಲಿ ನಡೆಯಿತು ಎಂಬುದು ಗಮನಾರ್ಹ. ಆಗೆಲ್ಲ ಮುಕ್ತವಾದ ವಾತಾವರಣವಿತ್ತು.